

# ನೀರಿನೊಳಗಿನ ಮಂಜು

■ ಡಾ. ನಾ. ಮೊಗಸಾಲೆ
ಕಲೆ: ಮನೋಹರ ಕೆ. ಆಚಾರ್ಯ

## ವರ್ತಮಾನದ ಎಚ್ಚರದಲ್ಲಿ

ಸೌಮ್ಯ ಹೆಡೆಬಿಚ್ಚಿದ ಹಾವಿನಂತಾದಳು. 'ಇಲ್ಲ. ನನ್ನ ದೇಹವನ್ನು ಮತ್ತೆ ಯಾರೂ ಮುಟ್ಟಲೂ ನಾನು ಅವಕಾಶ ಕೊಡುವುದಿಲ್ಲ. ತಾಳಿ ಕಟ್ಟಿದ ಮಾತ್ರಕ್ಕೆ ಗಂಡೊಂದಕ್ಕೆ ಗಂಡ ಎಂದು ಹೇಳುವ ಅಧಿಕಾರ ಖಂಡಿತ ಇಲ್ಲ ಎನ್ನುವುದನ್ನು ನೀವೂ ತಿಳಿಯಬೇಕು' ಎಂದಳು ತಾಯಿಗೆ. ಶಾರದಮ್ಮ ಸುಮ್ಮನಾದರು.

ಶಿವರಾಯ ಆ ರಾತ್ರೆ ಸೌಮ್ಯಳ ಮನೆಯಲ್ಲೇ ಉಳಕೊಂಡ. ಊಟ ಮುಗಿಸಿದ ಮೇಲೆ ಸೌಮ್ಯಳ ಬಳಿ ಬಂದು 'ನೀನು ಮಲಗುವಲ್ಲೇ ನಾನೂ ಮಲಗಲೇ?' ಎಂದು ಮೆತ್ತಗೆ ಕೇಳಿದ.

ಸೌಮ್ಯ ತಿರಸ್ಕಾರದಿಂದ ಹೇಳಿದಳು – 'ಅದು ಈ ಜನ್ಮದಲ್ಲಿ ಸಾಧ್ಯವಿಲ್ಲ. ನೀವು ಈಗಿನಿಂದೀಗಲೇ ಮನೆಬಿಟ್ಟು ಹೋದರೂ ನಾನು ಚಿಂತಿಸುವುದಿಲ್ಲ. ನಾಳೆಯಿಂದ ಮಾತ್ರ ಈ ಮನೆಯ ಬಾಗಿಲು ನಿಮಗೆ ಶಾಶ್ವತವಾಗಿ ಮುಚ್ಚಿರುತ್ತದೆ'.

ಸೌಮ್ಯಳ ಗಂಡನೆನ್ನುವ ಆ ಪ್ರಾಣಿ ಆ ರಾತ್ರೆ ಸಿಟ್ಟಿನಲ್ಲಿ ಹೊರಟುಹೋದ. ಸೌಮ್ಯ ಮರುದಿನ ಗೋವಿಂದ ಭಟ್ಟರಲ್ಲಿಗೆ ಹೋಗಿ ನಡೆದದ್ದನೆಲ್ಲ ಹೇಳಿದಳು. ಎಲ್ಲವನ್ನೂ ಕೇಳಿಸಿಕೊಂಡ ಭಟ್ಟರು, 'ನಾನಿದ್ದೇನೆ' ಎಂಬ ಧೈರ್ಯ ಕೊಟ್ಟರು. ಶಂಕರಿ ಅಮ್ಮ 'ಒಳ್ಳೆಯ ಕೆಲಸ ಮಾಡಿದೆ' ಎಂದರು.

ರಾಯರಿಗೆ ತನ್ನ ಅಮ್ಮ ಅನುಭವಿಸಿದ್ದ ನೋವು ಮತ್ತು ಅದೆಲ್ಲ ಈಗ ಯಾಕೆ ನೆನಪಾಯಿತು ಎಂದು ಅರ್ಥವಾಗದೆ ಸಣ್ಣಗೆ ತಲೆಸಿಡಿಯುತ್ತಿದೆ ಎಂದು ಅನಿಸತೊಡಗಿತು. ಅವರು ವರ್ಷಕ್ಕೊಮ್ಮೆ ತಜ್ಞ ವೈದ್ಯರಲ್ಲಿ ಹೋಗಿ ತಪ್ಪದೇ ತಮ್ಮನ್ನು ಜನರಲ್ ಚೆಕಪ್‌ಗೆ ಒಳಪಡಿಸಿಕೊಳ್ಳುತ್ತಿದ್ದರು. ಆ ಸಂದರ್ಭದಲ್ಲಿ ವೈದ್ಯರು 'ನಿಮಗೆ ಬಿ.ಪಿ. ಇಲ್ಲ, ಶುಗರ್ ಸ್ವಲ್ಪ ಇದ್ದರೂ ಹೃದಯದ ತೊಂದರೆಯಿಲ್ಲ. ಯು ಆರ್ ಪರ್ಫೆಕ್ಟ್‌ಲೀ ನಾರ್ಮಲ್' ಎಂದು ಹೇಳುವುದಿತ್ತು.

ಆದರೆ ಹೆಚ್ಚಿನ ಒತ್ತಡ ಇಲ್ಲದೇ ನಿದ್ದೆ ಬಾರದ ದಿನಗಳಲ್ಲಿ ಅವರನ್ನು ತಲೆನೋವು ಕಾಡುವುದಿತ್ತು. ಹಾಗೆಂದು ಈಚೆಗೆ ಅದೂ ಅಪರೂಪವಾಗಿತ್ತು. ಬಹಳ ವರುಷಗಳ ಹಿಂದೆ ಅಂದರೆ ರಾಯರ ಲೆಕ್ಕಾಚಾರದಲ್ಲೇ ಹೇಳುವುದಾದರೆ ಹದಿನಾರು ವರುಷಗಳ ಹಿಂದೆ ಅವರಿಗೆ 'ಮೈಗ್ರೇನ್' ಎಂಬ ತಲೆನೋವಿನ ತೀವ್ರತೆ ಇತ್ತು. ತಡೆಯಲಾಗದ ಆ ತಲೆನೋವಿಗಾಗಿ ಸಿದ್ಧ ಪ್ರಸಿದ್ಧರ ಚಿಕಿತ್ಸೆಗಳನ್ನೆಲ್ಲ ನಡೆಸಿ ಅವರು ಸೋತಿದ್ದರು. ಆ ಸಂದರ್ಭದಲ್ಲಿ ರಾಯರ ಸಹೋದ್ಯೋಗಿ ಒಬ್ಬರು 'ಸರ್ ನೀವು ಹೋಮಿಯೋಪತಿ ಚಿಕಿತ್ಸೆ ಯಾಕೆ ಮಾಡಬಾರದು? ನಮ್ಮ ರಾಂಪುರದ ರೈಲ್ವೇ ಸ್ಟೇಶನ್ನಿನ ಹಿಂಬದಿಯಲ್ಲಿ ಒಂದು ಹೋಮಿಯೊ ಕ್ಲಿನಿಕ್ ಇದೆ. ಡಾಕ್ಟರ್ ಬೋಂಸ್ಲೆ ಎಂದು ಅವರ ಹೆಸರು. ತುಂಬ ಅನುಭವಿ ವೈದ್ಯರು. ನನ್ನ ಹೆಂಡತಿಯ ಮೈಗ್ರೇನನ್ನು ಅವರೇ ಗುಣಪಡಿಸಿದ್ದು' ಎಂಬ ಮಾತನ್ನು ಹೇಳಿದ್ದರು. ರಾಯರು 'ಲೆಟ್ ಅಸ್ ಟ್ರೈ' ಎಂದು ಒಲ್ಲದ ಮನಸ್ಸಿನಿಂದ ಬೋಂಸ್ಲೆ ಇದ್ದಲ್ಲಿಗೆ ಹೋಗಿದ್ದರು. ಬೋಂಸ್ಲೆ ಅವರು ರಾಯರನ್ನು ಪರೀಕ್ಷಿಸಿ ಹತ್ತಾರು ಪ್ರಶ್ನೆಗಳನ್ನು ಹಾಕಿ 'ನಿಮ್ಮ ತಲೆನೋವು ಖಂಡಿತ ಕಡಿಮೆಯಾಗುತ್ತದೆ ಸರ್. ಒಂದು ತಿಂಗಳಲ್ಲೇ ಎಂಥ ರಿಸಲ್ಟ್ ಸಿಗುತ್ತದೆ ನೋಡಿ' ಎಂದಿದ್ದರು. ರಾಯರು ಈ ಶುಗರ್ ಪಿಲ್ಸ್‌ಗಳು ಏನು ಕೆಲಸ ಮಾಡಿಯಾವು ಎಂದು ಸಂಶಯದಿಂದಲೇ ಬೋಂಸ್ಲೆ ಅವರು ಕೊಟ್ಟ ಔಷಧವನ್ನು ಸೇವಿಸಲು ಮುಂದಾಗಿದ್ದರು. ಆದರೆ ತಿಂಗಳಲ್ಲಿ ಅವರ ತಲೆನೋವು ಕಡಿಮೆಯಾಗುತ್ತಾ ಬಂದು ಎರಡು ತಿಂಗಳ ಚಿಕಿತ್ಸೆಯಲ್ಲಿ ಅದು ಪೂರ್ಣವಾಗಿ ಮಾಯವಾಗಿತ್ತು.

ಬೋಂಸ್ಲೆಯವರು 'ನೋಡಿ ರಾಯರೇ, ಇನ್ನು ನಿಮಗೆ ತಲೆನೋವು ಎನ್ನುವುದು ಈ ಜನ್ಮದಲ್ಲಿ ಬರುವುದಿಲ್ಲ! ಬಂತು ಅಂತ ಆದರೆ ಈ ಪಿಲ್ಸ್ ತೆಗೆದುಕೊಳ್ಳಿ' ಎಂದು ಯಾವುದೋ ಒಂದು ಶುಗರ್ ಪಿಲ್ಸ್ ಅವರಿಗೆ ನೀಡಿದ್ದರು. ಅಂದಿನಿಂದ ರಾಯರನ್ನು ತಲೆನೋವು ಬಾಧಿಸಿದ್ದೇ ಇರಲಿಲ್ಲ. ಆದರೂ ಪ್ರಯಾಣದ ಸಂದರ್ಭದಲ್ಲಿ ಅಥವಾ ಸರಿಯಾಗಿ ನಿದ್ದೆ ಬಾರದೇ ಇದ್ದಾಗ ಮೈಗ್ರೇನ್ 'ನಾನೂ ಇದ್ದೇನೆ' ಎನ್ನುವಂತೆ ಅಪರೂಪದಲ್ಲಿ